ತುಂಬಲಾಗಿದ್ದು ಪ್ರಸ್ತುತ ಯಾವ ಉಪನ್ಯಾಸಕರ ಕೊರತೆಯೂ ಇರುವುದಿಲ್ಲ.

ಅನುದಾನಿತ ಕಾಲೇಜಿನಲ್ಲಿ ಒಂದು ಹಿಂದಿ ಉಪನ್ಯಾಸಕರ ಹುದ್ದೆ ಮತ್ತು ಒಂದು ಭೌತಶಾಸ್ತ್ರ ಉಪನ್ಯಾಸಕರ ಹುದ್ದೆಗಳು ಖಾಲಿ ಇವೆ. ಈ ಹುದ್ದೆಗಳನ್ನು ಪದ್ಧತಿಯಂತೆ ತುಂಬಬೇಕಾಗಿರುವುದರಿಂದ ಸಧ್ಯಕ್ಕೆ ಖಾಲಿ ಇದೆ.

(ಆ) ಉದ್ಭವಿಸುವುದಿಲ್ಲ.

ವಿಷಯ : – ಕೋಲಾರ ಜಿಲ್ಲೆಯಲ್ಲಿ ಕೊರತೆ ಇರುವ ಉಪಾಧ್ಯಾಯರುಗಳ ಸಂಖ್ಯೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 294(632)

ಶ್ರೀ ಎಂ.ನಾರಾಯಣಸ್ವಾಮಿ(ಬೇತಮಂಗಲ)

ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೋಲಾರ ಜಿಲ್ಲೆಯಲ್ಲಿ ಕೊರತೆ ಇರುವ ಉಪಾಧ್ಯಾಯರುಗಳ ಸಂಖ್ಯೆಎಷ್ಟು? (ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಾಲೆ ಬಗ್ಗೆ ಪ್ರತ್ಯೇಕ ವಿವರ ನೀಡುವುದು)

ಆ) ಆ ಉಪಾಧ್ಯಾಯರ ಕೊರತೆಯನ್ನು ಸರ್ಕಾರ ಯಾವಾಗ ಬಗೆಹರಿಸುವುದು

ಶ್ರೀಮತಿ ನಾಗಮ್ಮ ಸಿ.ಕೇಶವಮೂರ್ತಿ

(ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು)

ಕೋಲಾರ ಜಿಲ್ಲೆಯ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಈ ಕೆಳಗಿನಂತೆ ಶಿಕ್ಷಕರ ಹುದ್ದೆಗಳು ಖಾಲಿ ಇರುತ್ತವೆ

ಪ್ರಾಥಮಿಕ ಮಾಧ್ಯಮಿಕ	ಪ್ರೌಢ ಶಾಲಾ ಸಹ
ಶಿಕ್ಷಕರ ಹುದ್ದೆಗಳು	ಶಿಕ್ಷಕರ ಹುದ್ದೆಗಳು
753 ಹುದ್ದೆಗಳು	455 ಹುದ್ದೆಗಳು

ಖಾಲಿಯಿರುವ ಹುದ್ದೆಗಳನ್ನು ತುಂಬುವ ಬಗ್ಗೆ ಶೀಘ್ರ ಕ್ರಮ ಕೈಗೊಳ್ಳಲಾಗುತ್ತಿದೆ.

ವಿಷಯ : – ಬಂಗಾರ ಪೇಟೆ ಪ್ರಥಮದರ್ಜೆ ಕಾಲೇಜಿಗೆ ನೂತನ ಕಟ್ಟಡ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 295(633)

ಶ್ರೀ ಎಂ.ನಾರಾಯಣಸ್ವಾಮಿ(ಬೇತಮಂಗಲ)

ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ಬಂಗಾರಪೇಟೆ ಪ್ರಥಮ ದರ್ಜೆ ಕಾಲೇಜಿಗೆ ನೂತನ ಕಟ್ಟಡ ಕಟ್ಟಲು ಕೋರಿ ಸುಮಾರು 63 ಲಕ್ಷ ರೂಪಾಯಿಗಳ ಅಂದಾಜು ಪಟ್ಟಿ ಬಗ್ಗೆ ಪ್ರಸ್ತಾವನೆ ಸಲ್ಲಿಸಲಾಗಿದೆಯೇ?

(ಆ) ಹಾಗಿದ್ದಲ್ಲಿ ಈ ಅಂದಾಜನ್ನು ಮಂಜೂರು ಮಾಡುವಲ್ಲಿ ವಿಳಂಬವುಂಟಾಗಲು ಕಾರಣವೇನು?

(ಇ) ನೂತನ ಕಟ್ಟಡ ಕಟ್ಟಲು ಮಂಜೂರಾತಿ ನೀಡಿ ಹಣಕಾಸಿನ ಸೌಲಭ್ಯಗಳನ್ನು ಯಾವಾಗ ಒದಗಿಸಲಾಗುವುದು.

ಶ್ರೀ ಎಸ್.ಎಂ. ಯಾಹ್ಯಾ

(ಉನ್ನತ ಶಿಕ್ಷಣ ಸಚಿವರು)

ಹೌದು

ಅನುದಾನ ಒದಗಿಸುವುದಿಲ್ಲ. ಅನುದಾನ ಒದಗಿಸಿದ ನಂತರ ಆಡಳಿತಾತ್ಮಕ ಅನುಮೋದನೆ ನೀಡಲಾಗುವುದು.

ಅನುದಾನ ಒದಗಿಸಲು ಅವಶ್ಯಕವಾದ ಕ್ರಮ ಆದ್ಯತೆ ಮೇರೆಗೆ ತೆಗೆದುಕೊಂಡು ಆಡಳಿತ್ಮಾತಕ ಅನುಮೋದನೆ ನೀಡಿ ಕಟ್ಟಡ ಪ್ರಾರಂಭಿಸಲು ಕ್ರಮ ಜರುಗಿಸಲಾಗುವುದು.

ವಿಷಯ : – ನಿವೃತ್ತಿ ಹೊಂದಿದ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಗುತ್ತಿಗೆ ಆಧಾರದ ಮೇಲೆ ನೇಮಕದ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 296(515)

ಶ್ರೀ ಬಿ.ಹಂಪನಗೌಡ(ಸಿಂಧನೂರು)

ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನಿವೃತ್ತಿ ಹೊಂದಿದ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳುವ ಉದ್ದೇಶ ಸರಕಾರಕ್ಕಿರುವುದೆ?

ಆ) ಇದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀಮತಿ ನಾಗಮ್ಮ ಸಿ.ಕೇಶವಮೂರ್ತಿ

(ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)

ಇಲ್ಲ.

ಉದ್ಭವಿಸುವುದಿಲ್ಲ

ವಿಷಯ : – ಸಿಂಧನೂರು ತಾಲ್ಲೂಕಿನ ಜಾಲಿಹಾಳು ಮತ್ತು ಗೋನವಾರದ ಪ್ರೌಢಶಾಲೆಯಲ್ಲಿ ಶಿಕ್ಷಕರ ಕೊರತೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 297(517)

ಶ್ರೀ ಬಿ.ಹಂಪನಗೌಡ (ಸಿಂಧನೂರು)

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಸಿಂಧನೂರು ತಾಲ್ಲೂಕಿನ ಚೌಲಿಹಾಳ್ ಮತ್ತು ಗೋನವಾರದ ಗ್ರಾಮಗಳ ಪ್ರೌಢಶಾಲೆಗೆ ಶಿಕ್ಷಕರ ಕೊರತೆ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ ;

ಆ. ಬಂದಿದ್ದಲ್ಲಿ ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀಮತಿ ನಾಗಮ್ಮ ಸಿ.ಕೇಶವಮೂರ್ತಿ

(ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು)

ಬಂದಿದೆ.

ಪಾಠ ಪ್ರವಚನಗಳಿಗೆ ತೊಂದರೆಯಾಗದಂತೆ ಶಿಕ್ಷಕರ ಕೊರತೆ ಇರುವ ಶಾಲೆಗಳಿಗೆ ಹೆಚ್ಚುವರಿ ಶಿಕ್ಷಕರಿರುವ ಶಾಲೆಗಳಿಂದ ನಿಯೋಜನೆಯ ಮೇಲೆ ತೈನಾತಿಸಲು ಸಂಬಂಧಪಟ್ಟ ಸಹ ನಿರ್ದೇಶಕರುಗಳಿಗೆ ಆದೇಶ ನೀಡಲಾಗಿದೆ. ಮತ್ತು ಖಾಲಿ ಹುದ್ದೆಗಳನ್ನು ಖಾಯಂ ಆಗಿ ತುಂಬುವ ಬಗ್ಗೆ